ಆ ಗ್ಯಾಪ್ ಒಂದು. ಇನ್ನು ಅವನು ಹೇಗೆ ಬದುಕಬಲ್ಲ? ಈಗಲೇ ಅವನು ತಾಯಿಯನ್ನು ಅನುಮಾನಿಸುತ್ತಿದ್ದಾನೆ. ತೀರಾ ಗೊತ್ತಾಗೋದೇನೆಂದರೆ ನಾಳೆ ದೊಡ್ಡವನಾದ ಮೇಲೆ ಅವನು ಸೈಕೊ ಆಗಿ ಬದಲಾಗ್ತಾನೆ ಅಂತ. ಹೇಗೆ ಊಹಿಸೋದು... ನನ್ನ ಮಗ... ನನ್ನ ಬಂಗಾರ ಕಂದ...'

ಆಕೆ ಮುಖ ಬದಲಾಯಿತು. ದುಃಖದಿಂದ ಮುಖದಲ್ಲಿ ನಿರಿಗೆಗಳು ಮೂಡಿದವು.

'ಅದಕ್ಕೇ ನನಗೆ ಕಷ್ಟ. ಡಾಕ್ಟರುಗಳಾಗಿ ಎಂಜಿನಿಯರುಗಳಾಗಿ ಸಾಫ್ಟ್‌ವೇರ್ ಪ್ರೊಫೆಷನಲ್ಸ್ ಆಗಿ ತಯಾರಿಸಿ ಮುಚ್ಚಿಕೊಡುವ ಓದು ಅವನಿಗೆ ಬೇಡ. ಅವನು ತಂದುಕೊಳ್ಳುತ್ತಿರುವ ರ್‍ಯಾಂಕುಗಳು ಅವನಿಗೆ ಒಳ್ಳೆಯದು ಮಾಡಲಾರವು. ಅವುಗಳಿಗೆ ಈಗಲೇ ಬೆಲೆಯಿಲ್ಲ. ಭವಿಷದಲ್ಲಿ ಇನ್ನೂ ಇರಲ್ಲ. ಬರಲಿರುವ ದಿನಗಳಲ್ಲಿ ಏನಾದರೂ ಬೆಲೆ ಅಂತ ಉಳಿದಿದ್ದರೆ ಅದು ಸೃಜನಶೀಲ ಕಲೆಗೇ. ಈ ಅರ್ಥಹೀನ ಐಡೆಂಟಿಟಿಗಳಿಂದಾಗಿ ಕ್ರೈಸಿಸ್‌ಗಳೊಂದಿಗೆ ಹಣ್ಣಗಾಯಿ ನೀರಗಾಯಿ ಆಗುವ ವ್ಯಕ್ತಿಗಳಿಂದ ಒಬ್ಬ ಮನುಷ್ಯನನ್ನು ಭಿನ್ನವಾಗಿ ನಿಲ್ಲಿಸಬಲ್ಲಂಥದ್ದು ಕಲೆ. ಆ ಕಲೆಯೊಂದು ಗೊತ್ತಿದ್ದರೆ ಸಾಕು. ಅದು ಅವನ ಕೈಹಿಡಿದು ನಡೆಸಿದರೆ ಸಾಕು. ಕಣ್ಣೀರು ಬಂದಾಗ ಅವನನ್ನು ಸಂತೈಸಿದರೆ ಸಾಕು. ಜೀವನಪೂರ್ತಿ ಅವನಿಗೆ ಜೊತೆಯಾಗಿದ್ದರೆ ಸಾಕು.

ಇದು ಮನುಷ್ಯರನ್ನು ಭೈರಾಗಿಗಳಾಗಿ ಬದಲಾಯಿಸುತ್ತಿರುವ ಸೊಸೈಟೀರಿ. ಭೈರಾಗಿಗಳು ಏಕಾಂಗಿಗಳು. ಆದರೆ ಅವರಿಗೆ ಜೊತೆಯಾಗಿ ಹಾಡಿರುತ್ತದೆ. ಅದಕ್ಕೇ ಅವರು ಬದುಕಬಲ್ಲರು. ಅದಕ್ಕಾಗಿಯೇ ನಮ್ಮವನಿಗೂ ಕೂಡ ಹಾಡು ಜೊತೆಯಿರಲಿ ಅಂತ ನನ್ನಾಶೆ. ಇಷ್ಟೊತ್ತು ನೀವು ಹೇಳಿದಿರಲ್ಲ... ನಿಮ್ಮ ಅಯ್ಯಪ್ಪನ ದೇಹದೊಳಗೇ ಸಂಗೀತವಿದೆ ಅಂತ. ನಮ್ಮವನ ದೇಹದೊಳಗೂ ಸಂಗೀತ ಇದೇರಿ. ಅವನ ಜೀನ್ಸ್‌ನೊಳಗೇ ಇದೆ. ಆದರೆ ನಮ್ಮ ಕೈಯಾರೆ ನಾವೇ ಅದು ಮೂಕವಾಗುವಂತೆ ಮಾಡಿದ್ದೀವಿ. ನಮ್ಮ ಧಾವಂತದಲ್ಲಿ ಅವನನ್ನು ನಿರ್ಲಕ್ಷ್ಯ ಮಾಡಿ' ಇದ್ದಕ್ಕಿದ್ದಂತೆ ಆಕೆ ಜೋರಾಗಿ ಅತ್ತಳು.

'ಸಮಾಧಾನ ಮಾಡ್ಕೊಳ್ಳಿ ಸಮಾಧಾನ ಮಾಡ್ಕೊಳ್ಳಿ' ಅಂದೆ ನಿಧಾನವಾಗಿ.

ಅಷ್ಟು ಹೊತ್ತಿಗೇ ಆಕೆ ಎಚ್ಚರ ತಪ್ಪಿದ್ದಳು. ಟೀಪಾಯ್ ಮೇಲಿದ್ದ ಬಾಟಲ್ ಅನ್ನು ನೂಕಲು ನೋಡಿದಳು. ಗಟ್ಟಿಯಾಗಿ ಹಿಡಿದುಕೊಂಡೆ.

ಆಕೆಯ ಅಳು ನಿಲ್ಲಲಿಲ್ಲ.

'ದಣಿದುಬಿಟ್ಟಿದೀನ್ರೀ... ತುಂಬಾ ದಣಿದುಬಿಟ್ಟಿದೀನಿ' ಅಂದಳು ಗಂಟಲು ಒತ್ತಿಹಿಡಿದವಳಂತೆ.

ಸ್ವಲ್ಪ ಹೊತ್ತಿಗೆ ಹಾಗೇ ಮಲಗಿಬಿಟ್ಟಳು.

ನಾನು ನಿಧಾನವಾಗಿ ಆಕೆಯನ್ನು ಕುರ್ಚಿಯಲ್ಲಿ ಕೂರಿಸಿ ಮೆಲ್ಲಗೆ ರೂಮಿನಿಂದ ಹೊರಬಂದೆ. ಹಾಲ್‌ನಲ್ಲಿ ಟೀವಿಗೆ ಎದುರಾಗಿ ಚಾಪೆ ಹಾಸಿಕೊಂಡು ಕೆಲಸದವಳು ಮಲಗಿದ್ದಳು.

ಬಹುಶಃ ಪಕ್ಕದ ರೂಮಿನಲ್ಲಿ ಚಿನ್ನು ಮತ್ತಿನಲ್ಲಿ ಮಲಗಿರಬಹುದು.

ಸ್ವಲ್ಪ ಹೊತ್ತು ಹಾಗೇ ನಿಂತುಕೊಂಡೆ.

ನನಗೋಸ್ಕರ ಸಿದ್ಧಪಡಿಸಿದ ಊಟ ಇಲ್ಲೇ ಎಲ್ಲೋ ಇದ್ದಿರಬೇಕು. ಉಣಬೇಕೆನಿಸಲಿಲ್ಲ. ಹಸಿವು ಇಂಗಿಹೋಗಿತ್ತು.

ನಿಧಾನವಾಗಿ ಹೆಜ್ಜೆ ಹಾಕುತ್ತ ಮನೆಯಿಂದ ಹೊರಬಿದ್ದು ಮೆಟ್ಟಿಲಿಳಿದು ರೋಡಿಗೆ ಬಂದೆ.

ಮಳೆ ನಿಂತಿತ್ತು.

ಇದಾಗಿ ಎರಡು ಮೂರು ವಾರಗಳಲ್ಲಿ ಆಕೆ ಎರಡು ಮೂರು ಸಲ ಫೋನ್ ಮಾಡಿದಳು. ತನ್ನ ಮಗನನ್ನು ಮ್ಯೂಜಿಕ್‌ಗೆ ಸೇರಿಸಲು ಮಾಡುತ್ತಿರುವ ಪ್ರಯತ್ನಗಳ ಬಗ್ಗೆ ನನ್ನೊಂದಿಗೆ